**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ರವರ ನ್ಯಾಯಾಲಯ, ಕೊಪ್ಪ</u>**

**<u>ಸಿ.ಸಿ. ನಂ. *391/2020*</u>**

***<u>ಫಿರ್ಯಾಧಿದಾರರುಃ</u>*** ***ಸರ್ಕಾರದ ಪರವಾಗಿ ಯಪುರ ಪೊಲೀಸರು***

**ವಿರುದ್ಧ**

***<u>ಆರೋಪಿ/ತರುಃ</u>*** ಸುಂದ್ರೇಶ ಬಿನ್ ಲೇಟ್ ಚಾಮಿ, *42* ವರ್ಷ, ವ್ಯವಸಾಯ ವೃತ್ತಿ, ವಾಸ ಅಡಿಗೆಬೈಲು, ಅಡಿಗೆಬೈಲು ಗ್ರಾಮ, ಕೊಪ್ಪ ತಾಲ್ಲೂಕು.

- - -

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ *313* ರ ಪ್ರಕಾರ ಆರೋಪಿಯ ಹೇಳಿಕೆ</u>**

ಪ್ರಃ1ಃಅಭಿಯೋಜನೆಯವರ ಸಾಕ್ಷಿದಾರರ ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃ ಕೇಳಿದ್ದೇನೆ.

ಪ್ರಃ2ಃ ಪ್ರಾಸಾ.1 ಶ್ರೀಮತಿ ಸೌಮ್ಯ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ.2 ಮತ್ತು ಚಾಸಾ.3 ರವರು ನಮ್ಮ ಪಕ್ಕದ ಮನೆಯವರು. ಚಾಸಾ.8 ನನ್ನ ಚಿಕ್ಕಮ್ಮ, ಚಾಸಾ.9 ನನ್ನ ತಮ್ಮ. ಸುಮಾರು 10 ವರ್ಷಗಳ ಹಿಂದೆ ನನ್ನ ಗಂಡನಿಂದ ನಾನು ಪ್ರತ್ಯೇಕವಾಗಿ ನನ್ನ ಮಕ್ಕಳೊಂದಿಗೆ ವಾಸವಿದ್ದೇನೆ. ಆರೋಪಿ ನನ್ನ ಹೆಸರಿನಲ್ಲಿ ಕರಪತ್ರಗಳನ್ನು ಬರೆದು, ರಸ್ತೆ ಮೇಲೆ ಹಾಗೂ ಸಂಬಂಧಿಕರ ಮನೆಯ ವಿಳಾಸಕ್ಕೆ ಹಾಗೂ ನನ್ನ ವಿಳಾಸಕ್ಕೆ ಕೆಟ್ಟ ಕೆಟ್ಟದಾಗಿ ಬರೆದು ಹಾಕಿರುತ್ತಾರೆ. ದಿನಾಂಕಃ 01.12.2019 ರಂದು ಚಾಸಾ.8 ರವರ ಮನೆ ಬಳಿ ಹೋಗಿ ನನ್ನ ಹೆಸರಿನಲ್ಲಿ ಕೆಟ್ಟದಾಗಿ ಕರಪತ್ರವನ್ನು ಹಾಗೂ ಫೋಟೋ ಹಾಕಿದ್ದರು. ಚಾಸಾ.8 ನನಗೆ 6-00 ಗಂಟೆಗೆ ಫೋನ್ ಮಾಡಿ ತಿಳಿಸಿದರು. ಆ ದಿನ ನಾನು ದೂರು ದಾಖಲಿಸಿರುವುದಿಲ್ಲ. ದಿನಾಂಕಃ 02.12.2019 ರಂದು ಆರೋಪಿ ವಿರುದ್ಧ ಜಯಪುರ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ. ನಂತರ ದಿನಾಂಕಃ 03.12.2019 ರಂದು ಪೊಲೀಸರು ನನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ. ದಿನಾಂಕಃ 04.12.2019 ರಂದು ಶೃಂಗೇರಿ ನ್ಯಾಯಾಧೀಶರ ಮುಂದೆ ಕಲಂ 164 ರ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರ:3ಃ ಪ್ರಾಸಾ.6 ಶ್ರೀ ಗೌತಮ್, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ.1 ನನ್ನ ದೊಡ್ಡಮ್ಮನ ಮಗಳು. ಚಾಸಾ.1 ರವರ ಬಗ್ಗೆ ಕೆಟ್ಟ ಪದಗಳಿಂದ ಬೈದು, ಬೆದರಿಕೆ ಹಾಕಿ ನಮ್ಮ ಮನೆಯ ಎದುರುಗಡೆ ಹಾಕಿದ್ದರು. ನಂತರ ನನ್ನ ತಾಯಿ ಬಂದು ನೋಡಿ ನನಗೆ ಸದರಿ ವಿಚಾರವನ್ನು ತಿಳಿಸಿದರು. ನಂತರ ಚಾಸಾ.1 ರವರಿಗೆ ಫೋನ್ ಮಾಡಿ ಸದರಿ ಚೀಟಿ ಅಂಟಿಸಿರುವ ವಿಚಾರ ತಿಳಿಸಿದರು. ನಂತರ ಚಾಸಾ.1 ರವರು ಠಾಣೆಗೆ ಹೋಗಿ ದೂರು ನೀಡಿದರು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿ ತನ್ನ ಬೈಕ್ ಸಂಖ್ಯೆ ಕೆಎ-18/4603 ದ್ವಿಚಕ್ರ ವಾಹನದಲ್ಲಿ ಹಾಕಿ ಹೋಗಿರುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ ಸುಳ್ಳು

ಪ್ರ:4ಃ ಪ್ರಾಸಾ.9 ಶ್ರೀಮತಿ ಜಯಂತಿ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ.1 ನನ್ನ ಅಕ್ಕನ ಮಗಳು, ಚಾಸಾ.2 ನನ್ನ ಮಾವನಾಗಬೇಕು, ಚಾಸಾ.3 ನನ್ನ ಅಣ್ಣ, ಚಾಸಾ.9 ನನ್ನ ಮಗ, ಚಾಸಾ.11 ನನ್ನ ಅಕ್ಕ, ಚಾಸಾ.12 ನನ್ನ ತಂಗಿ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ನಮ್ಮ ಮನೆಯ ಗೇಟ್ ಹತ್ತಿರ ಚಾಸಾ.1 ರವರ ಹೆಸರಿನಲ್ಲಿ ಒಂದು ಚೀಟಿಯನ್ನು ಕವರಿನಲ್ಲಿ ಇಟ್ಟಿದ್ದರು. ನನಗೆ ಓದಲು ಬಾರದೇ ಇರುವುದರಿಂದ ನನ್ನ ಮಗನ ಹತ್ತಿರ ನೀಡಿದೆನು. ಆಗ ಚಾಸಾ.1 ರವರು ಫೋನ್ ಮಾಡಿ ಜಯಪುರ ಪೊಲೀಸರಿಗೆ ವಿಚಾರ ತಿಳಿಸಿದರು. ನಂತರ ಜಯಪುರ ಠಾಣೆಯಲ್ಲಿ ನಾನು ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ ಸುಳ್ಳು

ಪ್ರ:5ಃ ಪ್ರಾಸಾ.10 ಶ್ರೀ ಸತೀಶ್ ಕೆ.ಎಸ್., ಪಿ.ಎಸ್.ಐ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.12.2019 ರಂದು ಚಾಸಾ.1 ರವರು ಠಾಣೆಗೆ 8-30 ಗಂಟೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಮೊಕದ್ದಮೆ ಸಂಖ್ಯೆ 31/2019 ರಲ್ಲಿ ಕಲಂ 501, 509, 354 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ03/12/2019 ರಂದು ಪ್ರಕರಣದಲ್ಲಿ ಆರೋಪಿತನ ಪತ್ತೆಕಾರ್ಯಕ್ಕಾಗಿ ಚಾಸಾ.17 ಮತ್ತು ಚಾಸಾ.18 ರವರನ್ನು ನೇಮಕ ಮಾಡಿರುತ್ತೇನೆ. ನಂತರ ಠಾಣಾ ಸಿಬ್ಬಂದಿಗಳೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ 8 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಮಹಜರ್ ಕ್ರಮವನ್ನು ಚಾಸಾ 2 ಮತ್ತು ಚಾಸಾ 3 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12 ಗಂಟೆವರೆಗೆ ಜರುಗಿಸಿ, ಫೋಟೊ ತೆಗೆಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, 3 ಕರಪತ್ರಗಳನ್ನು ವಶಕ್ಕೆ ಪಡೆದು, ಬಿಳಿ ಬಟ್ಟೆಯಲ್ಲಿ ಹಾಕಿ **ಪಿ** ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ನಂತರ ವಾಪಾಸ್ಸಾಗಿ ಕರಪತ್ರಗಳನ್ನು ಮಾಲುಪಟ್ಟಿ ಸಂಖ್ಯೆ 35/2019 ರಲ್ಲಿ

ನಮೂದಿಸಿರುತ್ತೇನೆ. ನಂತರ ಅದೇ ದಿನ ಮದ್ಯಾಹ್ನ 12-45 ಗಂಟೆಗೆ ಪ್ರಕರಣದ ಆರೋಪಿ ಸುಂದರೇಶನನ್ನು ಚಾಸಾ.17 ಹಾಗೂ ಚಾಸಾ.18 ರವರು ಹಾಜರುಪಡಿಸಿದ ಮೇರೆಗೆ ಆರೋಪಿತನ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ನಂತರ ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ.8 ರವರ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ6ಃ ಪ್ರಾಸಾ.10 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ ದಿಃ04/12/2019 ರಂದು ಪ್ರಕರಣದಲ್ಲಿ ಚಾಸಾ.1 ರವರ ಹೇಳಿಕೆಯನ್ನು ದಂ. ಪ್ರ. ಸಂ. 164 ರ ರೀತ್ಯಾ ಪಡೆಯಲು ಮಹಿಳಾ ಸಿಬ್ಬಂದಿಯ ಮೂಲಕ ಶೃಂಗೇರಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಚಾಸಾ 1 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕಃ06/12/2019 ರಂದು ಪ್ರಕರಣದಲ್ಲಿ ಆರೋಪಿತನು ಕೃತ್ಯಕ್ಕೆ ಬಳಸಿದ ಬೈಕನ್ನು ಪತ್ತೆ ಮಾಡಲು ಚಾಸಾ.19 ರವರನ್ನು ನೇಮಕ ಮಾಡಿರುತ್ತೇನೆ. ಸದರಿಯವರು ಕೆಎ-18 ಯು 4603 ಬೈಕನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಬೈಕನ್ನು ಠಾಣಾ ಮುಂಭಾಗದಲ್ಲಿ ಚಾಸಾ 4 ಮತ್ತು ಚಾಸಾ 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ವಶಕ್ಕೆ ಪಡೆದಿರುತ್ತೇನೆ. ಸದರಿ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆ. ವಶಕ್ಕೆ ಪಡೆದ ಬೈಕನ್ನು ಮಾಲುಪಟ್ಟಿ ಸಂಖ್ಯೆ 36/2019 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 13 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಮನವಿ ನೀಡಿರುತ್ತೇನೆ. ದಿಃ07/12/2019 ರಂದು ಚಾಸಾ.9 ಹಾಗೂ ಚಾಸಾ.10 ರವರ ಹೇಳಿಕೆ ಪಡೆದಿರುತ್ತೇನೆ. ದಿಃ14/12/2019 ರಂದು ನ್ಯಾಯಾಲಯದ ಆದೇಶದ ಮೇರೆಗೆ ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲ್ ಅನ್ನು ಚಾಸಾ 6 ಮತ್ತು ಚಾಸಾ 7 ರವರ ಸಮಕ್ಷಮ 11 ರಿಂದ 11-30 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ವಾಹನ ಬಿಡುಗಡೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆ. ಹಾಗೂ ವಾಹನದ ಆರ್.ಸಿ. ಮಾಲೀಕರ ಹೇಳಿಕೆ ಪಡೆದಿರುತ್ತೇನೆ. ದಿಃ20/12/2019 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ಚಾಸಾ.13 ರವರು ನೀಡಿದ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ22/12/2019 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ 11 ಮತ್ತು ಚಾಸಾ 12 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕಃ10/03/2020 ರಂದು ಚಾಸಾ.1 ರವರ ದಂ. ಪ್ರ. ಸಂ. ಕಲಂ 164 ರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ.15 ರವರಿಂದ ಕಲಂ 65 ಬಿ ರೀತ್ಯಾ ದೃಡೀಕರಣವನ್ನು ಪಡೆದಿರುತ್ತೇನೆ. ನಂತರ ಪ್ರಕರಣದಲ್ಲಿ ತನಿಖೆ ಮುಕ್ತಾಯವಾಗಿದ್ದು ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ

ನಿವೇದಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ ಸುಳ್ಳು

ಪ್ರಃ7ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

ಉಃ ಇಲ್ಲ

ಪ್ರಃ8ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೆ?

ಉಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 14.07.2026.

ಸಹಿ/-xxx14.07.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.